# ವಿಪಶ್ಯನ ವಾರ್ತೆ
# VIPASSANA VARTE

ಕನ್ನಡ ಮಾಸಪತ್ರಿಕೆ, **10 ಜೂನ್ 2018**, ಬೆಂಗಳೂರು, ಸಂಪುಟ 4, ಸಂಚಿಕೆ 2, ಪುಟಗಳು-4. **ಸಂಪಾದಕರು** : ಜಿ.ಟಿ.ಗೋವಿಂದಪ್ಪ

Kannada monthly, **10 June 2018**, Bangaluru, Vol. 4, No.2, Pages-4, KARKAN2015/68727 **Editor**: G.T. Govindappa.

ಚಂದಾ: ವಾರ್ಷಿಕ ರೂ. 30, ಆಜೀವ : ರೂ. 500. Subscription :Annual Rs. 30; Life : Rs. 500/-

ಪ್ರಕಾಶನ: ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್. Published by: Karnataka Vipassana Prachara Samiti Trust.


**ಧಮ್ಮ ಪದಗಳು**

ಉಚ್ಛಿನ್ದ ಸಿನೇಹಮತ್ತನೋ,
ಕುಮುದಂ ಸಾರದಿಕಂ ವ ಪಾಣಿನಾ.
ಸನ್ತಿಮಗ್ಗಮೇವ ಬ್ರೂಹಯ,
ನಿಬ್ಬಾಣಂ ಸುಗತೇನ ದೇಸಿತಂ.

ಶರತ್ಕಾಲದಲ್ಲಿ ಕೊಳದ ಕಮಲದ ಹೂವನ್ನು ಒಬ್ಬ ವ್ಯಕ್ತಿಯು ತನ್ನ ಕೈಯಿಂದ ಕೀಳುವಂತೆ, ನಿನ್ನಲ್ಲಿಯ ಕಟ್ಟಾಸೆಯನ್ನು ಕತ್ತರಿಸು. ಬುದ್ಧರು ನಿಬ್ಬಾಣದ ಬಗ್ಗೆ ನಿರೂಪಿಸಿದ್ದಾರೆ. ನಿಬ್ಬಾಣಕ್ಕೆ ಮುನ್ನಡೆಸುವ ಆ ಮಾರ್ಗವನ್ನು ಅನುಸರಿಸು.

**ಧಮ್ಮಪದ – 285, ಮಗ್ಗವಗ್ಗೋ.**

## ವಿಪಶ್ಯನ ಕೇಂದ್ರಗಳ ಶಾಂತಿಯುತ ಪರಿಶುದ್ಧತೆಯನ್ನು ಕಾಪಾಡುವುದಕ್ಕೆ ಕ್ರಮಗಳು


**ಪ್ರಧಾನ ಆಚಾರ್ಯ ಎಸ್.ಎನ್. ಗೋಯಂಕ (1924–2013)**


(4ಮೇ,2015 ರ ಇಂಗ್ಲಿಷ್‌ನ ವಿಪಶ್ಯನ ವಾರ್ತಾಪತ್ರದಿಂದ ಅನುವಾದಿಸಲಾಗಿದೆ.)

ಬುದ್ಧ ವಿಹಾರಗಳು ಸ್ನೇಹ ಕೂಟಗಳಿಗೆ ಅಥವಾ ಆರಾಮದ ಜೀವನಕ್ಕಾಗಿ ಅಲ್ಲ. ವಿಪಶ್ಯನ ಧ್ಯಾನದ ಗಂಭೀರ ಅಭ್ಯಾಸಕ್ಕಾಗಿ ಜನರು ವಿಹಾರಗಳಿಗೆ ಬರುತ್ತಿದ್ದರು. ಆದರೆ ಆಗಿನ ಕಾಲದ ಅನೇಕ ಪಂಥೀಯ ಆಶ್ರಮಗಳಲ್ಲಿ ಕಾಡು ಹರಟೆಯಲ್ಲಿ ಕಾಲ ಕಳೆಯುತ್ತಿದ್ದ ಸೋಮಾರಿಗಳಿರುತ್ತಿದ್ದರು.

ಬುದ್ಧರ ಮಾನಸ್ಟರಿಗಳನ್ನು (ಪುರುಷ ಸಂನ್ಯಾಸಿಗಳು ಒಟ್ಟಾಗಿ ವಾಸಿಸುವ ಸ್ಥಳ) ಆಶ್ರಮಗಳೆಂದು ಕರೆಯುತ್ತಿರಲಿಲ್ಲ. ಅವುಗಳನ್ನು 'ವಿಹಾರಗಳು' ಅಥವಾ ಧ್ಯಾನ ಕೇಂದ್ರಗಳು ಎಂದು ಕರೆಯಲಾಗುತ್ತಿತ್ತು. ಅಲ್ಲಿ ವಾಸಿಸುವವರೆಲ್ಲ ಕಠಿಣ ಪರಿಶ್ರಮದಿಂದ ಕೆಲಸ ಮಾಡುತ್ತಾ ಮನಸ್ಸುಗಳನ್ನು ಪರಿಶುದ್ಧಮಾಡಿಕೊಳ್ಳಲಿ ಎಂಬ ಸಹಾನುಭೂತಿಯ ತಿಳುವಳಿಕೆಯಿಂದ ಈ ವಿಹಾರಗಳು ಕಟ್ಟುನಿಟ್ಟಾದ ಶಿಸ್ತನ್ನು ಪಾಲಿಸುತ್ತಿದ್ದವು.

ಬಹುತೇಕ ಧ್ಯಾನ ಸಾಧಕರು ಸ್ವಯಂ–ಶಿಸ್ತಿನಿಂದಿರುತ್ತಿದ್ದರು. ಆದರೂ ವಿಹಾರಗಳಲ್ಲಿ ಪರಿಶುದ್ಧ ವಾತಾವರಣವನ್ನು ಕಾಪಾಡಲು ಬುದ್ಧರು ಒಂದು ನಿಯಮವನ್ನು ಮಾಡಿದ್ದರು: ಈ ಹಿಂದೆ ಒಂದು ಪಂಥಕ್ಕೆ ಸೇರಿದ್ದ ಅಥವಾ ಒಂದು ಪಂಥದ ಆಶ್ರಮದಲ್ಲಿ ವಾಸವಾಗಿದ್ದ ಯಾವುದೇ ವ್ಯಕ್ತಿಯು ಭಿಕ್ಷುವಾಗಿ ದೀಕ್ಷೆ ಪಡೆದು ಭಿಕ್ಷು ಸಂಘ ಸೇರಬಯಸಿದರೆ, ಅವನಿಗೆ ತಕ್ಷಣವೇ ದೀಕ್ಷೆ ನೀಡುತ್ತಿರಲಿಲ್ಲ. ಅವನನ್ನು ನಾಲ್ಕು ತಿಂಗಳ ಕಾಲ ಪರೀಕ್ಷಿಸಲಾಗುತ್ತಿತ್ತು. ಅವರಿಂದ ಶಿಸ್ತಿನ ಜೀವನ ನಡೆಸಲು ಸಾಧ್ಯವೇ ಎಂಬುದನ್ನು ಪರೀಕ್ಷಿಸಲು ಹಾಗೆ ಮಾಡಲಾಗುತ್ತಿತ್ತು. ಆದರೆ ಸಾಮಾನ್ಯ ಜನರಿಗೆ ಅಥವಾ ಸಂಸಾರಸ್ಥರಿಗೆ ಅವರು ಔಪಚಾರಿಕವಾಗಿ ಕೋರಿಕೊಂಡ ತಕ್ಷಣ ದೀಕ್ಷೆ ನೀಡಲಾಗುತ್ತಿತ್ತು.

ಅನೇಕ ಪಂಥದವರ ಅಶಿಸ್ತಿನ, ಆರಾಮದಾಯಕ ಜೀವನವನ್ನು ನೋಡಿ ಅಥವಾ ಪಂಥೀಯ ಆಶ್ರಮಗಳಲ್ಲಿ ವಾಸಿಸುತ್ತಿರುವವರನ್ನು ನೋಡಿ, ಅನುಭವದ ಆಧಾರದ ಮೇಲೆ ಬುದ್ಧರು ಈ ನಿಯಮವನ್ನು ಅನುಷ್ಠಾನಗೊಳಿಸಿದರು. ಅವರು ವಟಗುಟ್ಟುತ್ತಾ ದಿನವನ್ನು, ಗೊರಕೆ ಹೊಡೆಯುತ್ತಾ ರಾತ್ರಿಯನ್ನು ಕಳೆಯುತ್ತಿದ್ದರು. ತಕ್ಷಣವೇ ಅವರಿಗೆ ಭಿಕ್ಷುವಿನ ದೀಕ್ಷೆ ಕೊಟ್ಟರೆ, ಈ ಅಶಿಸ್ತಿನ ಜನರು ವಿಹಾರಗಳ ವಾತಾವರಣವನ್ನು ಕಲುಷಿತಗೊಳಿಸಬಹುದು. ಆದ್ದರಿಂದ, ಅವರಿಗೆ ಪ್ರವೇಶ ನಿರಾಕರಿಸುವ ಬದಲು, ಸಂನ್ಯಾಸ ದೀಕ್ಷೆ ಕೊಡುವ ಮುನ್ನ ಈ ನಾಲ್ಕು ತಿಂಗಳ ಪರೀಕ್ಷೆಯನ್ನು ಅವರಿಗೆ ನೀಡಲಾಗುತ್ತಿತ್ತು. ಇದು ಅವರ ಅನುಕೂಲಕ್ಕಾಗಿ. ವಿಹಾರದ ಧಾರ್ಮಿಕ ಜೀವನಕ್ಕೆ ಹೊಂದಿಕೊಳ್ಳಲು ಅವರಿಗೆ ಸಮಯ ಕೊಡಲಾಗುತ್ತಿತ್ತು. ವಿಹಾರದಲ್ಲಿ ಅವರ ಮುಖ್ಯವಾದ ಕೆಲಸವೆಂದರೆ, ಆರ್ಯ ಮೌನವನ್ನು ಪಾಲಿಸುತ್ತಾ ಗಂಭೀರವಾಗಿ ವಿಪಶ್ಯನ ಧ್ಯಾನ ಸಾಧನೆ ಮಾಡುವುದು.

ವಿಹಾರದಲ್ಲಿ ಮಾತನಾಡುವುದಕ್ಕೆ ಇದ್ದ ಅತ್ಯಂತ ಪ್ರಮುಖವಾದ ನಿಯಮವೆಂದರೆ:

***"ಧಮ್ಮೀ ವಾ ಕಥಾ ಅರಿಯೋ ವಾ ತುಣ್ಹಿಭಾವೋ."***

–ಧರ್ಮದ ಬಗ್ಗೆ ಚರ್ಚಿಸಿ ಅಥವಾ ಆರ್ಯಮೌನ ಪಾಲಿಸಿ.

**ಧರ್ಮದ ವಿಷಯಗಳನ್ನು ಚರ್ಚಿಸುವುದು ಹೇಗೆ?**

ಒಬ್ಬ ಧ್ಯಾನ ಸಾಧಕನು ಧರ್ಮದ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ವಿಷಯದ ಮೇಲೆ ಒಬ್ಬ ಹಿರಿಯ ಸಾಧಕರನ್ನು ಕೇಳಿದರೆ, ಅವನು ಸರಿಯಾದ ಉತ್ತರವನ್ನು ಪಡೆದುಕೊಳ್ಳುತ್ತಾನೆ. ಪ್ರಶ್ನಿಸುವವ ಪ್ರಶ್ನೆಗಳನ್ನು ಕೇಳಬೇಕು, ಅಥವಾ ಮಾರ್ಗದರ್ಶಕ ಉತ್ತರ ನೀಡಬೇಕು; ಒಂದು ಬಾರಿಗೆ ಒಬ್ಬರು ಮಾತ್ರ ಮಾತಾಡಬೇಕು. ಆ ರೀತಿ ಮಾಡುವುದರಿಂದ ಧ್ಯಾನ ಕೇಂದ್ರದ ಪ್ರಶಾಂತ ವಾತಾವರಣ ಕದಡುವುದಿಲ್ಲ. ಅದಕ್ಕೆ ಬದಲಾಗಿ ಅವರು ಚರ್ಚೆ ಅಥವಾ ವಾದ ಮಾಡಲು ಪ್ರಾರಂಭಿಸಿದರೆ ಕೋಲಾಹಲ ಉಂಟಾಗುತ್ತದೆ. ಆದರೆ ಯಾರನ್ನಾದರೂ ಒಂದು ಪ್ರಶ್ನೆ ಕೇಳಿದರೆ ಉಪಸ್ಥಿತರಿರುವ ಇನ್ನಿತರರು ಕೇಳಿಸಿಕೊಳ್ಳಲು ಸಾಧ್ಯವಾಗುತ್ತದೆ, ಮತ್ತು ಅವರ ಅನುಮಾನಗಳೂ ಪರಿಹಾರವಾಗುತ್ತವೆ. ಆ ರೀತಿಯಾಗಿ ಅವರು ಧರ್ಮ ಸ್ಫೂರ್ತಿಯನ್ನು ಪಡೆದು, ಆರ್ಯ ಮೌನವನ್ನು ಪಾಲಿಸುತ್ತಾರೆ ಮತ್ತು ಧ್ಯಾನದಲ್ಲಿ ನಿರತರಾಗುತ್ತಾರೆ.

ಬುದ್ಧರು ಹೇಳಿದರು:

***"ಇಧಾವುಸೊ ಸಾರಿಪುತ್ತಾ, ಭಿಕ್ಖು ಪಟಿಸಲ್ಲಾನಾರಾಮೊ ಹೋತಿ ಪಟಿಸಲ್ಲಾನ ರತೊ, ಅಜ್ಝತ್ತಂ ಚಿತೋಸ– ಮಥಾಮನುಯುತ್ತೋ ಅನಿರಾಕತಜ್ಝಾನೊ, ವಿಪಶ್ಯನಾಯ ಸಮನ್ನಾಗತೋ, ಬ್ರೂಹೇತಾ ಸುನ್ಯಾಗಾರಾನಮ್."***

–ಸಾರಿಪುತ್ತ, ಒಬ್ಬ ಭಿಕ್ಖುವು ಏಕಾಂತದಲ್ಲಿ ಧ್ಯಾನ ಮಾಡುವುದರಲ್ಲಿ ಆನಂದಪಡುತ್ತಾನೆ. ಮನಸ್ಸಿನ ಪ್ರಶಾಂತತೆಯನ್ನು, ಪರಿಶುದ್ಧತೆಯನ್ನು ಬೆಳೆಸಿಕೊಳ್ಳಲು ಏಕಾಂತತೆಯನ್ನು ಮಿಸಲಿಡಲು ಆನಂದಪಡುತ್ತಾನೆ. ವಿಪಶ್ಯನ ಧ್ಯಾನವನ್ನು ಕಡೆಗಣಿಸದೆ, ತನ್ನೊಳಗಿನ ಸತ್ಯದ ಬಗ್ಗೆ ಒಳನೋಟವನ್ನು ಗಳಿಸಿಕೊಳ್ಳುತ್ತಾನೆ. ಈ ರೀತಿಯಾಗಿ ಅವನು ಹೆಚ್ಚಿನ ಸಮಯವನ್ನು ಧ್ಯಾನ ಕೋಶದಲ್ಲಿ (ಶೂನ್ಯಾಗಾರದಲ್ಲಿ, ಧ್ಯಾನದ ಚಿಕ್ಕಕೋಣೆ) ಕಳೆಯುತ್ತಾನೆ.

ಇಂತಹ ನಿಷ್ಠಾವಂತ ಭಿಕ್ಖುಗಳು ಗಳಿಸಿದ ಅಗಣಿತ ಪುಣ್ಯದ ಫಲವಾಗಿ ಧ್ಯಾನ ಕೇಂದ್ರಗಳ (ವಿಹಾರಗಳ) ಸಂಖ್ಯೆ ಹೆಚ್ಚಾಯಿತು. ಹೆಚ್ಚು ಜನರು ವಿಪಶ್ಯನವನ್ನು ಕಲಿತು, ಅಭ್ಯಾಸ ಮಾಡಿ, ದುಃಖದಿಂದ ಹೊರಬರಲು ಶಕ್ತರಾದರು. ಈ ಕಾರಣಕ್ಕಾಗಿ ಆರ್ಯ ಮೌನ ಪಾಲನೆಗೆ ಅಷ್ಟೊಂದು ಮಹತ್ವ ಕೊಡಲಾಯಿತು. ಆರ್ಯ ಮೌನವನ್ನು ಪಾಲಿಸುವುದು ಆಳವಾದ ಧ್ಯಾನಕ್ಕೆ ಪೂರಕವಾಗಿದೆ ಮತ್ತು ಸಂಘದಲ್ಲಿ ಧರ್ಮದ ಉಜ್ವಲ ಕಾಂತಿಗೆ ನೆರವಾಗಿದೆ.

ಗಂಭೀರ ಧ್ಯಾನ ಸಾಧಕರು ಕಾಡಿನಲ್ಲಿ ವಾಸಿಸುವಾಗಲೂ ಸಹ ಅತ್ಯಂತ ಹೆಚ್ಚಿನ ಆರ್ಯ ಮೌನ ಪಾಲಿಸುತ್ತಾರೆ. ವಿಹಾರಗಳಲ್ಲಿ ಆರ್ಯ ಮೌನ ಪಾಲಿಸುವ ಅವಶ್ಯಕತೆ ಹೆಚ್ಚಿದೆ. ಏಕೆಂದರೆ, ವಿಹಾರಗಳಲ್ಲಿ ಹೆಚ್ಚಿನ ಸಂಖ್ಯೆಯ ಧ್ಯಾನ ಸಾಧಕರು ಒಟ್ಟಿಗೇ ವಾಸಿಸುತ್ತಿರುತ್ತಾರೆ. ಮೌನ ಮುರಿಯುವ ಅವಶ್ಯಕತೆಯಿದ್ದರೆ, ಮೃದುವಾಗಿ, ಮೆಲ್ಲಗೆ ಮಾತಾಡಬೇಕು. ಗಟ್ಟಿಯಾಗಿ ಮಾತನಾಡಿ ಇತರೆ ಧ್ಯಾನ ಸಾಧಕರಿಗೆ ತೊಂದರೆ ಮಾಡಬಾರದು.

**ಸಾರಿಪುತ್ತ ಮತ್ತು ಮಹಾಮೊಗ್ಗಲ್ಲಾನ.**

ವಿಹಾರಗಳಲ್ಲಿ ನಿಶ್ಯಬ್ದತೆಯನ್ನು ಮತ್ತು ಪ್ರಶಾಂತ ವಾತಾವರಣವನ್ನು ಕಾಪಾಡುವ ಅವಶ್ಯಕತೆಯ ಬಗ್ಗೆ ಬುದ್ಧರು ಯಾವಾಗಲೂ ಒತ್ತುಕೊಡುತ್ತಿದ್ದರು. ಎಲ್ಲಿಯ ತನಕ ಧ್ಯಾನ ಸಾಧಕರು ಧರ್ಮದ ವಿಷಯಗಳಿಗೆ ಸಂಬಂಧಿಸಿ ಮೆಲುದನಿಯಲ್ಲಿ ನಿಧಾನವಾಗಿ ಮಾತಾಡುತ್ತಾರೋ ಅಲ್ಲಿಯ ತನಕ ವಿಪಶ್ಯನ ಧ್ಯಾನ ಮಾಡಲು ಬೇಕಾದ ಹಿತಕರ ವಾತಾವರಣವನ್ನು ಕಾಪಾಡಬಹುದು. ಆದರೆ ಅನೇಕ ಜನರು ಒಂದೇ ಸಮಯದಲ್ಲಿ ಗಟ್ಟಿಯಾಗಿ ಮಾತಾಡಿದರೆ ಶಾಂತಿಭಂಗವಾಗುತ್ತದೆ.

ಈ ರೀತಿಯಾದರೆ ಪಂಥೀಯ ಆಶ್ರಮಗಳಿಗೂ ಮತ್ತು ಧ್ಯಾನಕೇಂದ್ರಗಳಿಗೂ ಯಾವುದೇ ವ್ಯತ್ಯಾಸವಿರುವುದಿಲ್ಲ. ಧ್ಯಾನ ಸಾಧನೆಗೆ ಬೇಕಾದ ಹಿತಕರ ವಾತಾವರಣವು ಕಲುಷಿತವಾಗುತ್ತದೆ. ಗಲಾಟೆಗೆ ಕಾರಣರಾದವರಿಗೆ ಬುದ್ಧರು ಎಚ್ಚರಿಕೆ ಕೊಡುತ್ತಿದ್ದರು.

ಆರ್ಯ ಮೌನ ಅಥವಾ ಸರಿಯಾದ ಮಾತಿನ ಈ ನಿಯಮವನ್ನು ಅವಶ್ಯಕತೆ ಬಿದ್ದಾಗ, ನಿಶ್ಯಬ್ದ ಮತ್ತು ಶಾಂತ ವಾತಾವರಣದ ಕಾಡಿನ ವಿಹಾರಗಳಿಗೂ ಅನ್ವಯಿಸಲಾಗುತ್ತಿತ್ತು. ಪರಿಶುದ್ಧ ವಾತಾವರಣವನ್ನು ಕಾಪಾಡಲು ಅಲ್ಲಿಯೂ ಇದು ಅವಶ್ಯಕವಾಗಿತ್ತು.

ಒಂದು ಸಂದರ್ಭದಲ್ಲಿ ಜ್ಞಾನೋದಯ ಪಡೆದವರು ಶಾಕ್ಯ ದೇಶದ ಆಮಲಿಕ ಕಾಡಿನ ಚಾತುಮಾದಲ್ಲಿದ್ದರು. ಹೊಸದಾಗಿ ಭಿಕ್ಷುವಿನ ದೀಕ್ಷೆ ಪಡೆದ ಪೂಜ್ಯ ಸಾರಿಪುತ್ತ ಮತ್ತು ಮೊಗ್ಗಲ್ಲಾನರ 500 ಶಿಷ್ಯರುಗಳ ಎರಡು ಗುಂಪುಗಳು ಅಲ್ಲಿಗೆ ಬಂದವು. ಗಟ್ಟಿಯಾಗಿ ಮಾತಾಡುತ್ತಾ ಅವರು ಕೋಲಾಹಲವೆಬ್ಬಿಸಿದರು. ಧರ್ಮದ ನಿಯಮಗಳು ಸಮಾನವಾಗಿ ಎಲ್ಲರಿಗೂ ಅನ್ವಯವಾಗುತ್ತವೆ ಮತ್ತು ಸಮನಾಗಿ ಪ್ರಯೋಜನಗಳನ್ನು ತರುತ್ತವೆ. ಆದ್ದರಿಂದ, ಈ 1000 ಗಲಾಟೆಯ ಭಿಕ್ಷುಗಳು ಸಂಘದ ಅತ್ಯಂತ ಹಿರಿಯರ ಮಾರ್ಗದರ್ಶನದಲ್ಲಿದ್ದರೂ ಜ್ಞಾನೋದಯ ಪಡೆದವರು ಬಲವಾದ ಔಷಧಿ ಕೊಟ್ಟರು.

***"ಗಚ್ಛಥ, ಭಿಕ್ಖವೇ, ಪಣಾಮೇಮಿ ವೊ, ನ ವೊ ಮಮ ಸಂತಿಕೆ ವತ್ಥಬ್ಬನ್' ತಿ."***

–(M.2. 157, ಚಾತುಮ ಸುತ್ತ)

–ಭಿಕ್ಷುಗಳೇ, ನೀವು ಹೊರಡಬಹುದು. ಬುದ್ಧರ ಜೊತೆ, ಇಲ್ಲಿ ಧ್ಯಾನದಲ್ಲಿ ಜೀವಿಸಲು ಇದು ನಿಮಗೆ ಸಮಯವಲ್ಲ.

ಮಹಾ ಕರುಣಾಮಯಿಯ ಶಿಸ್ತಿನ ಕ್ರಮಗಳ ಪ್ರಯೋಜನಗಳನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡು, ಇಬ್ಬರು ಹಿರಿಯರು ಭಗವಾನರಿಗೆ ವಂದಿಸಿ ತಮ್ಮ ಸಾವಿರ ಭಿಕ್ಷುಗಳ ಜೊತೆಗೆ ದೂರದ ಸ್ಥಳಕ್ಕೆ ಹೊರಟುಹೋದರು.

ಜನರು ದಿಗ್ಭ್ರಾಂತರಾದರು. ಏಕೆಂದರೆ ಸಾರಿಪುತ್ತ ಮತ್ತು ಮಹಾಮೊಗ್ಗಲ್ಲಾನರು ಬುದ್ಧರ ಬಲ ಮತ್ತು ಎಡಗೈಯಂತಿದ್ದರು. ಧ್ಯಾನದ ಪರಿಶುದ್ಧ ವಾತಾವರಣವನ್ನು ಹಾಳುಮಾಡಿದ್ದಕ್ಕಾಗಿ ಅವರನ್ನು ಹೊರಗೆ ಕಳುಹಿಸಲಾಯಿತು. ಜೇತವನದಂತಹ ದೊಡ್ಡ ವಿಪಶ್ಯನ ಧ್ಯಾನಕೇಂದ್ರದಲ್ಲಿ ಅಥವಾ ಒಂಟಿ ಕಾಡಿನಲ್ಲಿ ಸ್ವಯಂ–ಶಿಸ್ತಿನ ಅವಶ್ಯಕತೆಯಿದೆಯೇ? ಅದು ಅತ್ಯಾವಶ್ಯಕ. ಇದು ಎಲ್ಲಾ ವಿಪಶ್ಯನ ಧ್ಯಾನ ಸಾಧಕರಿಗೆ ಸಮ್ಮಾಸಂಬುದ್ಧರ ಕಾಲಾತೀತವಾದ, ಕರುಣೆಯಿಂದ ಕೂಡಿದ ಜ್ಞಾಪಕ(ನೆನಪು).

ಜನರು ಆಶ್ಚರ್ಯಪಟ್ಟರು, ಸಾರಿಪುತ್ತ ಮತ್ತು ಮಹಾಮೊಗ್ಗಲ್ಲಾನರು ಇಲ್ಲದೆ ಧರ್ಮವು ನಿರ್ವಿಘ್ನವಾಗಿ ಹೇಗೆ ಕೆಲಸ ಮಾಡುತ್ತದೆ? ಆತಂಕಕ್ಕೊಳಗಾಗಿದ್ದ ಚಾತುಮಾದ ಶಾಕ್ಯರು ಸ್ವಲ್ಪ ಕಾಲದ ನಂತರ ಬುದ್ಧರ ಬಳಿಗೆ ಬಂದು, ಧರ್ಮದ ಇಬ್ಬರು ಹಿರಿಯರಿಗಾಗಿ ವಿನಂತಿಸುತ್ತಾರೆ. ಸಹಂಪತಿ ಬ್ರಹ್ಮಾ ಅವರೂ ಪೂಜ್ಯ ಸಾರಿಪುತ್ತ ಮತ್ತು ಮಹಾಮೊಗ್ಗಲ್ಲಾನರು ಮತ್ತು 1000 ತಪ್ಪಿತಸ್ಥ ಭಿಕ್ಷುಗಳ ಪರವಾಗಿ ಮಾತನಾಡಿದರು.

***"ಅಭಿನಂದತು, ಭಂತೇ, ಭಗವಾ ಭಿಕ್ಖುಸಂಘಂ; ಅಭಿವದತು, ಭಂತೇ, ಭಗವಾ ಭಿಕ್ಖು ಸಂಘಂ."***

–(M.2. 158, ಚಾತುಮ ಸುತ್ತ)

– ಪ್ರಭು, ಜ್ಞಾನೋದಯ ಪಡೆದವರು, ಅವರನ್ನು ಸಂಘಕ್ಕೆ ಬರಲು ಅನುಮತಿಸಬೇಕು.

– ಪ್ರಭು, ಜ್ಞಾನೋದಯ ಪಡೆದವರು, ಮತ್ತೊಮ್ಮೆ ಅವರಿಗೆ ಪ್ರೀತಿಯ ಸೂಚನೆಗಳನ್ನು ಕೊಡಬೇಕು.

– ಒಬ್ಬ ಅಪರಿಮಿತ ಕರುಣಾಮಯಿ ಶಸ್ತ್ರಚಿಕಿತ್ಸಕನ ತರಹ, ಸಮ್ಮಾಸಂಬುದ್ಧರಿಗೆ ತಿಳಿದಿತ್ತು, ನೋವಿಲ್ಲದೆ ಸರಿಮಾಡುವುದು ಆಗುವುದಿಲ್ಲ ಎಂಬುದು. ಧ್ಯಾನ ಸಾಧಕರ ಉನ್ನತ ಕಲ್ಯಾಣಕ್ಕಾಗಿ ಇದು ಅವಶ್ಯಕವಿತ್ತು. ತಡಮಾಡದೆ 1000 ಭಿಕ್ಷುಗಳು ಗಂಭೀರವಾಗಿ ಧ್ಯಾನ ಮಾಡುತ್ತಾ ಪ್ರಗತಿ ಹೊಂದಿ ಪ್ರಯೋಜನಗಳನ್ನು ಪಡೆದರು. ಆಗ ಬುದ್ಧರು ಅತ್ಯಂತ ಸಂತೋಷದಿಂದ ವಿಹಾರಕ್ಕೆ ಮರಳಲು ಅವರಿಗೆ ಅನುಮತಿಸಿದರು.

ಈ ರೀತಿಯಾಗಿ, ವಿಪಶ್ಯನ ಕೇಂದ್ರದ ಪರಿಶುದ್ಧತೆಯನ್ನು ರಕ್ಷಿಸಿ, ಮುಂದುವರಿಸಿಕೊಂಡು ಹೋಗಲು ತಪ್ಪು ತಿದ್ದುವ ಕ್ರಮಗಳನ್ನು ಬುದ್ಧರು ಸ್ಪಷ್ಟಪಡಿಸಿದ್ದಾರೆ. ಶಿಸ್ತನ್ನು ಉಲ್ಲಂಘಿಸುವವರು ಹಿರಿಯ ಧರ್ಮ ಸೇವಕರುಗಳಾಗಿದ್ದರೆ ಅಥವಾ ಪೂಜ್ಯರಾದ ಸಾರಿಪುತ್ತ ಮತ್ತು ಮಹಾಮೊಗ್ಗಲ್ಲಾನರ ತರಹ ಬಹಳ ಹಿರಿಯ ಆಚಾರ್ಯರುಗಳಾಗಿದ್ದರೆ ಇದು ಇನ್ನೂ ಹೆಚ್ಚು ಅನ್ವಯಿಸುತ್ತದೆ.

* ---- * ---- * ---- *

## ನಿನಗೆ ಶುಭವಾಗಲಿ ಶಾರದಾಬೆನ್!

**ಪೂಜ್ಯ ಗುರೂಜಿ:** 'ಶಾರದ, ನನ್ನ ಮಗಳೆ! ವಿಪಶ್ಯನ ಸಂಶೋಧನಾ ಸಂಸ್ಥೆ(VRI)ಯನ್ನು ನಡೆಸುವ ಜವಾಬ್ದಾರಿಯನ್ನು ನೀನು ವಹಿಸಿಕೊಳ್ಳಬೇಕೆಂದು ನಾನು ಇಚ್ಛಿಸುತ್ತೇನೆ. ಇನ್ನು ಮುಂದೆ ನೀನು ಅದರ ಡೈರೆಕ್ಟರ್.'

**ಶಾರದಾಬೆನ್:** 'ಗುರೂಜಿ, ನಾನು ನಿಮ್ಮ ಸೇವೆ ಮಾಡಲು ಬದ್ಧಳಾಗಿದ್ದೇನೆ. ಆದರೆ, ನಿಮ್ಮ ವಿಪಶ್ಯನದ ಕೆಲಸದಲ್ಲಿ ಒಬ್ಬ ಸಾಮಾನ್ಯ ಸೇವಕಿಯಾಗಿರಲು ದಯವಿಟ್ಟು ನನ್ನನ್ನು ಬಿಟ್ಟುಬಿಡಿ. ಅಂತಹ ದೊಡ್ಡ ಜವಾಬ್ದಾರಿಯನ್ನು ನನಗೆ ಕೊಡಬೇಡಿ! ನಾನು ಅದಕ್ಕೆ ನ್ಯಾಯ ಒದಗಿಸುವೆನೆಂಬ ನಂಬಿಕೆಯಿಲ್ಲ' ಎಂಬುದು ಅವರ ವಿಷಾದಭರಿತ ಉತ್ತರವಾಗಿತ್ತು.

**ಗುರೂಜಿ :** 'ನನಗೆ ಮತ್ತು ಧರ್ಮಕ್ಕೆ ಸೇವೆ ಮಾಡಲು ನೀನು ಬದ್ಧಳಾಗಿದ್ದರೆ, ದಯವಿಟ್ಟು ನಾನು ಸೂಚಿಸಿದ್ದನ್ನು ಮಾಡು. ಈ ಜವಾಬ್ದಾರಿಯನ್ನು ನೀನು ವಹಿಸಿಕೊಳ್ಳಬೇಕೆಂದು ನಾನು ಬಯಸುತ್ತೇನೆ. ನನಗೆ ಗೊತ್ತು, ನೀನು ಉನ್ನತ ಹುದ್ದೆಗಳಿಗೆ ಹಂಬಲಿಸುವವಳಲ್ಲ. ಆದರೆ ನೀನು ಈ ಹುದ್ದೆಗೆ ಬಹಳ ಸೂಕ್ತವಾದ ವ್ಯಕ್ತಿ ಮತ್ತು ನಿನಗೆ ಅದನ್ನು ನಿಭಾಯಿಸುವ ಸಾಮರ್ಥ್ಯವಿದೆ ಎಂಬುದು ನನಗೆ ತಿಳಿದಿದೆ.' VRI ನ ನಿರ್ದೇಶಕರಾಗಿದ್ದ ಡಾ॥ ರವೀಂದ್ರ ಪಂಥ್‌ರವರು ನಳಂದ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡಲು ಹೊರಟು ಹೋದಾಗ, ಡಾ॥ ಶಾರದ ಸಾಂಘ್ವಿಯವರಿಗೆ, ಅವರ ಹಿಂಜರಿಯದ ಸಮರ್ಪಣೆ ಮತ್ತು ಸಾಮರ್ಥ್ಯಗಳನ್ನು ಕಂಡು, ಗುರೂಜಿಯವರು ಈ ರೀತಿಯಾಗಿ ಹೇಳಿದರು.

ಗುರೂಜಿಯವರ ಸೂಚನೆಯಂತೆ ಡಾ॥ ಶಾರದಾಬೆನ್‌ರವರು 2000ದಲ್ಲಿ ಹೊಸ ಜವಾಬ್ದಾರಿಯನ್ನು ವಹಿಸಿಕೊಂಡರು. ಧರ್ಮ ಹರಡುವುದರಲ್ಲಿ ವಿಪಶ್ಯನ ಸಂಶೋಧನಾ ಸಂಸ್ಥೆಯ ಪ್ರಮುಖ ಪಾತ್ರವನ್ನು ಮನಸ್ಸಿನಲ್ಲಿಟ್ಟುಕೊಂಡು ಅನೇಕ ಹೊಸ ಯೋಜನೆಗಳನ್ನು ಉತ್ಸಾಹದಿಂದ ಪ್ರಾರಂಭಿಸಿದರು.

ಡಾ॥ ಶಾರದಾಬೆನ್‌ರವರು ಗುರೂಜಿಯವರಿಗೆ ಪ್ರಮುಖ ಸಹಾಯಕರಾದರು. ಅತಿಮುಖ್ಯವಾದ ಸಂಶೋಧನೆಯನ್ನು ಯಾವಾಗಲೇ ಕೈಗೊಂಡರೂ ಸಾಮಾನ್ಯವಾದ ಮಾತೆಂದರೆ, 'ಶಾರದಾರವರನ್ನು ಕರೆ.' ಗಂಭೀರ ಧ್ಯಾನ ಆಕಾಂಕ್ಷಿಯ ಪ್ರಯೋಜನಕ್ಕಾಗಿ ಬುದ್ಧರ ಬೋಧನೆಗಳಿಗೆ ಸಂಬಂಧಿಸಿದ ಸಾಹಿತ್ಯವನ್ನು ಪುನರ್ ಅವಲೋಕಿಸಿ ಸ್ಥಾಪಿಸುವ ದೊಡ್ಡ ಕೆಲಸವನ್ನು ಗುರೂಜಿಯವರು ಕೈಗೆತ್ತಿಕೊಂಡಿದ್ದರು. ಯಾವುದೇ ಪರಾಮರ್ಶನ ಪುಸ್ತಕ ಬೇಕಾದರೂ ಗುರೂಜಿಯವರು ಶಾರದಾಬೆನ್ ಅವರನ್ನು ಕೇಳುತ್ತಿದ್ದರು. ಧರ್ಮದ ಕೆಲಸವನ್ನು ಮುಂದುವರಿಸಿಕೊಂಡು ಹೋಗಲು ಅಗಾಧವಾದ ಮಾಹಿತಿಯನ್ನು ಹುಡುಕುವ ಕೆಲಸದಲ್ಲಿ ತೊಡಗಿದ್ದ ಗುರು–ಶಿಷ್ಯೆಯರ ಮಧ್ಯೆ ದೀರ್ಘ ಮಾತುಕತೆಯಿಲ್ಲದೆ ಒಂದು ದಿನವೂ ಕಳೆಯುತ್ತಿರಲಿಲ್ಲ. ಕೆಲವೊಮ್ಮೆ ಒಂದಕ್ಕಿಂತ ಹೆಚ್ಚು ಬಾರಿ ಸಂಭಾಷಿಸುತ್ತಿದ್ದರು. ಅವರು ಹಿಂಜರಿಯದ ಆಧಾರ ಸ್ತಂಭವಾಗಿದ್ದರು ಮತ್ತು ಪಟ್ಟು–ಹಿಡಿದು ಕೆಲಸಮಾಡುತ್ತಿದ್ದರು. ಈಗ ಆ ಆಧಾರಸ್ತಂಭವಿಲ್ಲ.

ಗುರುಗಳಿಂದ ಒಂದು ದೂರವಾಣಿ ಕರೆ ಸಾಕು. ಸಾಧ್ಯವಿರುವ ಎಲ್ಲಾ ಕಡೆ ಕೈಗೆಟುಕದ ಪುಸ್ತಕಗಳನ್ನು ಮತ್ತು ಪರಾಮರ್ಶನಗಳನ್ನು

ಹುಡುಕುತ್ತಿದ್ದರು. ಯಾವ ಕೆಲಸವೂ ಅವರಿಗೆ ಅತೀ ಸಣ್ಣದಾಗಿರಲಿಲ್ಲ ಅಥವಾ ಅತೀ ದೊಡ್ಡದಾಗಿರಲಿಲ್ಲ. ಅವರಿಗೆ ಅದು ಬಹಳ ಸರಳ: 'ಅದು ಗುರೂಜಿಗೆ ಬೇಕಾಗಿದೆ.' ಬೇಕಾಗಿರುವ ಯಾವುದೋ ಟಿಪ್ಪಣಿ ಅಥವಾ ಪುಸ್ತಕ ಲಭ್ಯವಿಲ್ಲದಿದ್ದರೆ, ಶಾರದಾರವರು ಲೈಬ್ರರಿಗಳಲ್ಲಿ ಶೋಧಿಸುತ್ತಿದ್ದರು. ಯಾವ ಪ್ರಕಾಶಕರು, ದೇಶದ ಯಾವ ಭಾಗದಲ್ಲಿದ್ದಾರೆ ಎಂಬುದನ್ನು ಪತ್ತೆ ಹಚ್ಚುತ್ತಿದ್ದರು. ಅಂತಿಮವಾಗಿ ಬೇಕಾಗಿದ್ದನ್ನು ಪಡೆದೇ ತೀರುತ್ತಿದ್ದರು.

ಅವರ ಅಸಾಧಾರಣ ಸರಳತೆ, ಪಾಲಿ ಭಾಷೆಯ ಬಗೆಗಿನ ಅವರ ಗಾಢವಾದ ಪ್ರೇಮ ಮತ್ತು ಧರ್ಮಕ್ಕೆ ಸಂಬಂಧಿಸಿದ ಗುರೂಜಿಯವರ ಕೆಲಸಗಳನ್ನು ಮಾಡಲು ನಿರಂತರ ಶ್ರಮ ಗಮನಾರ್ಹವಾಗಿದ್ದವು. ಅನೇಕ ಬಾರಿ ಕೆಲಸ ಸುಲಭವಾಗಿರಲಿಲ್ಲ. ಆದರೆ ಗುರೂಜಿಯವರು ವಹಿಸಿದ ಕೆಲಸವನ್ನು ಮಾಡದೇ ಇರುವುದನ್ನು ಊಹಿಸಿಕೊಳ್ಳಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಅವರು ಸಂಗ್ರಹಿಸಿದ ಮಾಹಿತಿಯ ಡಜನ್‌ಗಟ್ಟಲೆ ಫೋಲ್ಡರ್‌ಗಳು ಗುರೂಜಿಯವರ ಗ್ರಂಥಾಲಯದಲ್ಲಿವೆ. ಧರ್ಮದ ಸಾಹಿತ್ಯದ ಮೇಲೆ ಗುರೂಜಿಯವರು ಪ್ರಾರಂಭ ಮಾಡಿದ ಬೆಲೆಕಟ್ಟಲಾಗದ ಕೆಲಸಕ್ಕೆ ಇವು ಪ್ರಾರಂಭದ ಆಕರಗಳಾದವು.

ಅವರ ಕೆಲಸದಲ್ಲಿ ನಮ್ರತೆಯಿತ್ತು ಮತ್ತು ಪ್ರಾಮಾಣಿಕತೆಯಿತ್ತು. ಧರ್ಮವನ್ನು ಮುಂದೆ ಕೊಂಡೊಯ್ಯುವುದೇ ಏಕಮಾತ್ರ ಗುರಿಯಾಗಿತ್ತು.

ಗುರೂಜಿಯವರಿಗೆ ಮತ್ತು ಆ ಮುಖೇನ ವಿಪಶ್ಯನದ ಸೇವೆ ಮಾಡಲು ಆಸಕ್ತರಾದ ಅನೇಕ ಜನರಿದ್ದರು, ಮತ್ತು ಅವರು ಅವರ ಸೇವೆಯನ್ನು ನೀಡಿದ್ದರು. ಅವರು ಪ್ರಾಮಾಣಿಕ ಸಹಾಯಕರಾಗಿದ್ದರು. ಇವರನ್ನು ಕುರಿತು ಗುರೂಜಿಯವರು ಹೇಳುತ್ತಿದ್ದರು: ನಾನು ಒಬ್ಬಂಟಿಯಲ್ಲ; 'ಸಾವಿರಾರು ಕೈಗಳಿಂದ ಧರ್ಮ ಬರುತ್ತಿದೆ.' ಇವರುಗಳಲ್ಲೆಲ್ಲಾ ಶ್ರೀಮತಿ ಶಾರದಾಬೆನ್ ಸಾಂಘ್ವಿಯವರು ವಿಶಿಷ್ಟವಾದ ಸೇವಕಿ. ಅವರ ಪರಿಶುದ್ಧ ಅರ್ಪಣೆ, ಪ್ರಾಮಾಣಿಕ ಕೆಲಸ ಮತ್ತು ಬುದ್ಧ, ಧರ್ಮ, ಸಂಘಕ್ಕೆ ಮತ್ತು ಅವರ ಪ್ರಸ್ತುತ ಆಚಾರ್ಯರಿಗೆ ಸಂಪೂರ್ಣ ಶರಣಾಗತಿಯಿಂದ ನಕ್ಷತ್ರದಂತೆ ಮಿನುಗಿದರು.

ತಮ್ಮ ಮೊದಲ ವಿಪಶ್ಯನ ಶಿಬಿರವನ್ನು ಡಿಸೆಂಬರ್ 1981 ರಲ್ಲಿ ಧಮ್ಮಗಿರಿಯಲ್ಲಿ ಮಾಡಿದರು. ಇದೇ ನಿಬ್ಬಾಣದ ಮಾರ್ಗ, ಅವರ ಸಂಪೂರ್ಣ ಮುಕ್ತಿಯ ದ್ವಾರ ಎಂಬುದು ಕೂಡಲೇ ಅವರಿಗೆ ಮನವರಿಕೆಯಾಯಿತು. ನಂತರ ಅವರು ಹಿಂತಿರುಗಿ ನೋಡಲಿಲ್ಲ. ತಮ್ಮ ಸ್ವಂತ ಧ್ಯಾನ ಸಾಧನೆಯನ್ನು ಮುಂದುವರಿಸುತ್ತಾ, ಅನೇಕ ಶಿಬಿರಗಳಲ್ಲಿ, ಮಕ್ಕಳ ಶಿಬಿರಗಳೂ ಸೇರಿದಂತೆ, ಸೇವೆ ಮಾಡಿದರು. ಎಲ್ಲೆಲ್ಲಿ ಕರೆಯುತ್ತಾರೋ ಅಲ್ಲೆಲ್ಲಾ ಸೇವೆ ನೀಡಿದ್ದಾರೆ.

1994ರಲ್ಲಿ ಗುರೂಜಿಯುವರು ಅವರನ್ನು ಸಹಾಯಕ ಆಚಾರ್ಯರಾಗಿ ನೇಮಿಸಿದಾಗ, ಹೊಸ ಜವಾಬ್ದಾರಿಯನ್ನು ನಮ್ರತೆಯಿಂದ ಒಪ್ಪಿಕೊಳ್ಳುವ ಮೊದಲು ಹಿಂದು ಮುಂದು ಯೋಚಿಸಿದರು; ಕೊನೆಗೆ ಇದನ್ನು ಮತ್ತೊಂದು ರೀತಿಯ ಧರ್ಮ ಸೇವೆಯಾಗಿ ಕಂಡರು.

ಗುರೂಜಿಯವರು ಉಪಯೋಗಿಸುತ್ತಿದ್ದ ಪ್ರೋತ್ಸಾಹದಾಯಕ ಪಾಲಿ ನುಡಿಗಟ್ಟುಗಳು ಮತ್ತು ಅವುಗಳ ಪರಿಣಾಮಗಳು ಇವರಿಗೆ ಅರ್ಥವಾಗುತ್ತಿಲ್ಲ ಎಂಬುದನ್ನು ಬೇಗ ಅರ್ಥಮಾಡಿಕೊಂಡರು. ಆಳದಲ್ಲಿ ಧರ್ಮವನ್ನು ಗ್ರಹಿಸಲು ಇದು ಬಹಳ ಮುಖ್ಯ ಎನಿಸಿತು. ಅದರ ಸೂಕ್ಷ್ಮತೆಗಳೊಡನೇ ಧರ್ಮವನ್ನು ಅರ್ಥಮಾಡಿಕೊಳ್ಳುವ ಉತ್ಸಾಹದಿಂದ VRI ಪ್ರಾರಂಭಿಸಿದ್ದ ಪಾಲಿ ತರಗತಿಗಳಿಗೆ ಶಾರದಾಬೆನ್ ಸೇರಿಕೊಂಡರು. ಪ್ರತಿವಾರದ ಕೊನೆಗೆ ಇದಕ್ಕಾಗಿ ಅವರು ಮುಂಬಯಿಯಿಂದ ಇಗತ್ಪುರಿಗೆ ಪ್ರಯಾಣಿಸುತ್ತಿದ್ದರು. 1999 ರಲ್ಲಿ ಎಂ.ಎ. ಮತ್ತು ಪಿ.ಹೆಚ್.ಡಿ. ಪದವಿ ಪಡೆದರು.

ಅವರು VRI ನಿರ್ದೇಶಕರಾಗಿದ್ದರಿಂದ ಪಾಲಿ ಭಾಷೆಯ ಮತ್ತು ಪಾಲಿ ಸಾಹಿತ್ಯದ ಅಧ್ಯಯನವು ಗಣನೀಯವಾಗಿ ಹೆಚ್ಚಿತು. ಉತ್ಸಾಹಶೀಲರಾದ ಮತ್ತು ಪರಿಶ್ರಮಪಟ್ಟು ಕೆಲಸ ಮಾಡುತ್ತಿದ್ದ ಅವರು ಅನೇಕ ಹೊಸ ಯೋಜನೆಗಳನ್ನು ಪ್ರಾರಂಭಿಸಿದರು. ಇಗತ್ಪುರಿಯ VRI ನಲ್ಲಿ ಪಾಲಿ ಭಾಷೆಯ ಬೋಧನೆ ಮಾಡುತ್ತಿದ್ದರು. ಮುಂಬಯಿ ವಿಶ್ವವಿದ್ಯಾನಿಲಯದ ಸೋಮಯ್ಯ ಕಾಲೇಜಿನಲ್ಲಿ ಬೌದ್ಧ ಸಾಹಿತ್ಯ ಬೋಧಿಸಲು ಸಂದರ್ಶಕ ಪ್ರಾಧ್ಯಾಪಕರಾಗಿ, ಎಂ.ಫಿಲ್. ಮತ್ತು ಪಿಹೆಚ್.ಡಿ. ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಕೆಲಸ ಮಾಡಿದರು.

ಪಾಲಿ ಸಾಹಿತ್ಯದಲ್ಲಿ ಎಂ.ಎ. ಮತ್ತು ಪಿಹೆಚ್.ಡಿ. ಪದವಿ ಪಡೆಯಲು ಅನುಕೂಲವಾಗುವಂತೆ ಮುಂಬಯಿ ವಿಶ್ವವಿದ್ಯಾನಿಲಯದ ಸಂಯೋಜನೆ ಪಡೆದುಕೊಳ್ಳುವಲ್ಲಿ ಯಶಸ್ವಿಯಾದರು. ಅಪರೂಪದ ಸಾಧನೆ. ಸಾಮಾನ್ಯವಾಗಿ ವರ್ಷಗಟ್ಟಲೆ ತೆಗೆದುಕೊಳ್ಳುತ್ತಿದ್ದ ಕೆಲಸವನ್ನು ಕೆಲವೇ ತಿಂಗಳುಗಳಲ್ಲಿ ಮುಗಿಸಿದ್ದರು. ಅವರು ಪಾಲಿ, ಸಂಸ್ಕೃತ ಮತ್ತು ಪ್ರಾಕೃತ ಅಧ್ಯಯನ ಮಂಡಳಿಗಳ ಸದಸ್ಯರಾಗಿದ್ದರು. ಈ ವಿಷಯಗಳಿಗೆ ಸಂಯೋಜನಾಧಿಕಾರಿಯಾಗಿ ನೇಮಕವಾಗಿದ್ದರು. ಅಲ್ಲದೆ VRI ಸಹಯೋಗದೊಂದಿಗೆ ಮುಂಬಯಿ ವಿಶ್ವವಿದ್ಯಾನಿಲಯವು ನಡೆಸುತ್ತಿದ್ದ 'ವಿಪಶ್ಯನ ಥಿಯರಿ ಮತ್ತು ಪ್ರಾಕ್ಟೀಸ್' ಕೋರ್ಸ್‌ಗೆ ಸಂದರ್ಶಕ ಪ್ರಾಧ್ಯಾಪಕರಾಗಿಯೂ ನೇಮಕವಾಗಿದ್ದರು. ಪಾಲಿ ಭಾಷೆ, ಬುದ್ಧರ ಬೋಧನೆಗಳ ಸಂಪುಟ, ಅವರ ಏಕಾಂಗಿ ಪರಿಶ್ರಮದಿಂದ ಅದ್ಭುತವಾದ ಬೆಳವಣಿಗೆ ಕಂಡವು.

ಧಮ್ಮಗಿರಿಯಲ್ಲಿ ಪಾಲಿ ಭಾಷೆಯ ಬೋಧನೆ ಚೆನ್ನಾಗಿ ವೃದ್ಧಿಯಾಯಿತು. ದಿನೇ ದಿನೇ ವಿದ್ಯಾರ್ಥಿಗಳ ಸಂಖ್ಯೆ ಬೆಳೆಯಿತು. ಆದರೆ, ಈ ಕೆಲಸವನ್ನು ಗ್ಲೋಬಲ್ ವಿಪಶ್ಯನ ಕೇಂದ್ರಕ್ಕೆ ವರ್ಗಾಯಿಸಲು ಗುರೂಜಿ ಮತ್ತು ಶಾರದಾಬೆನ್ ತೀರ್ಮಾನಿಸಿದರು. ಇದು ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳಿಗೆ, ಸಂದರ್ಶಕ ಉಪನ್ಯಾಸಕರುಗಳಿಗೆ ಮತ್ತು ಗುರೂಜಿಯವರಿಗೂ ಸಹ ಅನುಕೂಲವಾಗುತ್ತಿತ್ತು. ಆದ್ದರಿಂದ ಹೊಸ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲಾಯಿತು. ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ಕಲ್ಪಿಸಿ ತರಗತಿಗಳನ್ನು ಪ್ರಾರಂಭಿಸಲಾಯಿತು. ಈ ಕೇಂದ್ರಕ್ಕೆ 'ಪರಿಯತ್ತಿ ಭವನ' ಎಂದು ಹೆಸರಿಡಲಾಯಿತು. ಅವರ ಉತ್ಸಾಹಭರಿತ ಮತ್ತು ಪ್ರಾಮಾಣಿಕ ಕೆಲಸವನ್ನು ಕಂಡು, ಗುರೂಜಿಯವರು ಅವರನ್ನು ಮುಂಬಯಿಯ ಗೋರಯ್‌ನಲ್ಲಿರುವ ಗ್ಲೋಬಲ್ ವಿಪಶ್ಯನ ಫೌಂಡೇಷನ್‌ಗೆ ಆಜೀವ ಟ್ರಸ್ಟಿಯನ್ನಾಗಿ ನೇಮಕ ಮಾಡಿದರು.

ಅವರ ಸತತ ಪ್ರಯುತ್ನದಿಂದ ಪಾಲಿ ತರಗತಿಗಳಷ್ಟೇ ಪ್ರಾರಂಭವಾಗಲಿಲ್ಲ, ಮನತಟ್ಟುವಂಥ ಗ್ರಂಥಾಲಯವನ್ನೂ ಸ್ಥಾಪಿಸಲಾಯಿತು. ತುಲನಾತ್ಮಕ ಅಧ್ಯಯನಕ್ಕಾಗಿ ಎಲ್ಲಾ ಧರ್ಮಗಳ ಗ್ರಂಥಗಳು ಈ ಗ್ರಂಥಾಲಯದಲ್ಲಿ ಲಭ್ಯವಿವೆ. ಗುರೂಜಿಯವರ ಮರಣಾನಂತರ ಅವರ ವೈಯಕ್ತಿಕ ಗ್ರಂಥಾಲಯದಲ್ಲಿದ್ದ ಸಾವಿರಾರು ಪುಸ್ತಕಗಳನ್ನು ಈ ಗ್ರಂಥಾಲಯಕ್ಕೆ ವರ್ಗಾಯಿಸಲಾಯಿತು.

ಅವರ ಒಂದೇ ಗುರಿಯೆಂದರೆ, ಧ್ಯಾನ ಸಾಧನೆಯನ್ನು ತೀವ್ರವಾಗಿಸುವುದು, ಮತ್ತು ಅವರ ಧರ್ಮದ ಪ್ರಯಾಣದಲ್ಲಿ, ಎಷ್ಟು ಸಾಧ್ಯವೋ ಅಷ್ಟು ಧರ್ಮ ಸೇವೆಯನ್ನು ಗುರೂಜಿಯವರ ಮಾರ್ಗದರ್ಶನದಲ್ಲಿ ಮಾಡುವುದು. ಸೌಹಾರ್ದಯುತ ಪ್ರೀತಿಯಿಂದ ಅವರು ವಿದ್ಯಾರ್ಥಿಗಳಿಗೆ ಬೋಧಿಸುತ್ತಿದ್ದುದೇ ಅವರ ನಿಃಸ್ವಾರ್ಥ ಸೇವೆಗೆ ಪುರಾವೆಯಾಗಿದೆ.

ಅವರು ಈ ಕೆಲಸವನ್ನು, ಅಕ್ಷರಶಃ, ಕೊನೆಯುಸಿರಿರುವ ತನಕ ಮಾಡಿದರು. ಇಗತ್ಪುರಿಯ ಧಮ್ಮಗಿರಿಯಲ್ಲಿ 45 ದಿನಗಳ ದೀರ್ಘ ವಿಪಶ್ಯನ ಧ್ಯಾನ ಶಿಬಿರದಲ್ಲಿದ್ದರು. ಶಿಬಿರದ 25ನೇ ದಿನ, ಮಧ್ಯಾಹ್ನದ ಅಧಿಷ್ಠಾನದ ಕೂರುವಿಕೆ 3.30 ಗಂಟೆಗೆ ಮುಕ್ತಾಯವಾದ ತಕ್ಷಣ ಉಸಿರಾಟದ ತೊಂದರೆಯಿಂದ ಅವರ ಧ್ಯಾನ ಕೋಶದಿಂದ ಹೊರಬಂದು ಒಂದು ಮರದ ಕೆಳಗೆ ಮಲಗಿದರು. ಧಮ್ಮ ಸೇವಕರು ಮತ್ತು ಆಚಾರ್ಯರುಗಳು ಓಡಿಬಂದು ಡಾಕ್ಟರರಿಗೆ ಬರಹೇಳಿದರು. 'ನನ್ನ ಮರಣ ಸಮಯ ಬಂದಿದೆ' ಎಂದು ಅವರು ಶಾಂತವಾಗಿ ಪಿಸುನುಡಿದರು. ನಿದ್ರೆಗೆ ಜಾರಿದವರಂತೆ ಕೆಲವೇ ನಿಮಿಷಗಳಲ್ಲಿ ದೇಹ ತ್ಯಾಗ ಮಾಡಿದರು. ಅದು ಎಂದೆಂದಿಗೂ ಎಚ್ಚರಗೊಳ್ಳದ ನಿದ್ರೆ. ಅಂದು ಮಾರ್ಚ್ 27, 2015. ಅವರಿಗೆ 64ವರ್ಷ ವಯಸ್ಸಾಗಿತ್ತು.

ಕಡ್ಡಾಯವಾಗಿ ಮಾಡಬೇಕಾದ ಔಪಚಾರಿಕೆಗಳನ್ನು ಮುಗಿಸಿ ಅವರ ದೇಹವನ್ನು ಆಸ್ಪತ್ರೆಯಿಂದ ತೆಗೆದುಕೊಂಡು ಹೋಗಲಾಯಿತು. ಜನರು, ಅವರಿಗೆ ಅಂತಿಮ ನಮನ ಸಲ್ಲಿಸುತ್ತಿದ್ದರು. ಬಲವಾದ ಬಿರುಗಾಳಿಯಿಂದ ಕೂಡಿದ ಅಕಾಲಿಕ ಮಳೆ ಬೀಳಲು ಪ್ರಾರಂಭಿಸಿತು. ಇದು ಶುಭ ಸೂಚಕ – ಪ್ರತಿಯೊಬ್ಬ ಧ್ಯಾನ ಸಾಧಕನೂ ಬಯಸುವ ಮಂಗಳಕರ ಸಾವು ಇದಾಗಿತ್ತು.

ಉತ್ತಮವಾಗಿ ಬದುಕಿದ ಜೀವನ ಅದಾಗಿತ್ತು, ಮನುಷ್ಯ ಜನ್ಮದ ಒಂದು ನಿಜವಾದ ಉದ್ದೇಶಕ್ಕೆ ಸಮರ್ಪಿಸಿಕೊಂಡದ್ದು, ಧರ್ಮದಲ್ಲಿ ಸ್ಥಿರವಾಗಿ ಸ್ಥಾಪಿತಗೊಳ್ಳುವುದು ಮತ್ತು ಮಾರ್ಗದಲ್ಲಿ ಇತರರಿಗೆ ಸಹಾಯ ಮಾಡುವುದು. ಅಂತಹ ವ್ಯಕ್ತಿಗೆ ಯಾರಾದರೂ ಹೇಗೆ ಸಂತಾಪ ಸೂಚಿಸುವುದು. ಒಂದನ್ನು ಮಾತ್ರ ಹೇಳಬಹುದು – ಶಾರದಾಬೆನ್ ಶಾಂತಿಯಲ್ಲಿ ಲೀನವಾಗಿ. ಬೇರೆಯವರು ಅನುಕರಿಸಲು ನೀವು ಒಂದು ಮಾದರಿಯಾಗಿದ್ದಿರಿ.

ಒಬ್ಬ ಬದ್ಧತೆಯ ಮಾರ್ಗದರ್ಶಕರಾಗಿ, ಅವರು ಯಾವಾಗಲೂ ಪುಸ್ತಕಗಳ ಹೆಚ್ಚಿನ ಪ್ರತಿಗಳನ್ನು ತಮ್ಮ ಬಳಿ ಇಟ್ಟುಕೊಂಡಿರುತ್ತಿದ್ದರು. ಯಾರಿಗೆ ಗೊತ್ತು ಯಾವ ವಿದ್ಯಾರ್ಥಿ ಯಾವ ಪುಸ್ತಕ ಕೇಳಿಕೊಂಡು ಬರುತ್ತಾನೆಂದು! ಒಂದು ಅಗಾಧವಾದ ಗ್ರಂಥಾಲಯವನ್ನು ನಿರ್ಮಿಸಿಕೊಂಡಿದ್ದರು. ಭಾರತದ ಮತ್ತು ಜಗತ್ತಿನ ಮೂಲೆ ಮೂಲೆಯಿಂದ ಹುಡುಕಿ ಸಂಗ್ರಹಿಸಿದ ಪಾಲಿ ಗ್ರಂಥಗಳಿಂದ ಆ ಗ್ರಂಥಾಲಯ ತುಂಬಿತ್ತು. VRI ಗ್ರಂಥಾಲಯಕ್ಕೆ ಬೇಕಾಗಿರುವ ಯಾವುದೇ ಪುಸ್ತಕಗಳು ಅಥವಾ ಅಧ್ಯಯನ ಸಾಮಗ್ರಿ ಪಡೆದುಕೊಳ್ಳಲು ಅವರಿಗೆ ಗುರೂಜಿಯವರು ಪೂರ್ಣಾಧಿಕಾರ ಕೊಟ್ಟಿದ್ದರು.

**RNI. No. : KARKAN/2015/68727. Postal Regn. No.: RNP/KA/BGS/2253/2017-19**
**Published On 10th & Posted On 20th of every Month. Posted At : Bengaluru PSO, B'luru 26. Price(Annual)Rs.30. Pages-4.**

ಗೌರವಾನ್ವಿತ ಅಧ್ಯಾಪಕರು ಶಿಬಿರ ಮುಗಿಸಿ ಮರಳಿ ಬಂದು ಹೆಚ್ಚಿನ ಮಾರ್ಗದರ್ಶನ ನೀಡುತ್ತಾರೆಂದು ಅವರ ವಿದ್ಯಾರ್ಥಿಗಳು ಕಾಯುತ್ತಿದ್ದರು. ಆದರೆ ಈ ಬಾರಿ ಮಾತ್ರ ಅವರು ಮರಳುವುದಿಲ್ಲ. ಅವರ ಹಠಾತ್ತಾದ ನಿರ್ಗಮನ ಜೀವನದ ಕ್ಷಣಿಕತೆಯನ್ನು ಎತ್ತಿ ತೋರಿಸಿತು. ಅನಿಚ್ಚ! ಅವರ ಅಗಲಿಕೆಯು ತುಂಬಲು ಕಷ್ಟವಾದ ಶೂನ್ಯತೆಯನ್ನು ಬಿಟ್ಟುಹೋಗಿದೆ.

ಶಾರದಾಬೆನ್ ಶುಭವಾಗಲಿ! ನಾವು ನಿಮ್ಮನ್ನು ಕಳೆದುಕೊಳ್ಳುತ್ತೇವೆ. ಶಾರದ ಸಾಂಘ್ವಿ – ಮಾರ್ಚ್ 7, 1951 – ಮಾರ್ಚ್ 27, 2015

ವಿಪಶ್ಯನ ಸಂಶೋಧನಾ ಸಂಸ್ಥೆ

### ಗೋಯಂಕಾಜಿಯವರೊಂದಿಗೆ ಪ್ರಶ್ನೋತ್ತರಗಳು

**ಪ್ರಶ್ನೆ:** ಬಹುತೇಕ ಸಂಸ್ಥೆಗಳು, ಅವು ದೊಡ್ಡವಾದಂತೆ, ಅವುಗಳ ಬೆಳವಣಿಗೆ ಮತ್ತು ವಿಸ್ತರಣೆ ಕಡೆಗೇ ಮಗ್ನವಾಗಿರುತ್ತವೆ. ನಮ್ಮ ಧರ್ಮ ಸಂಸ್ಥೆಯು ಈ ತಪ್ಪನ್ನು ಮಾಡದಂತೆ ರಕ್ಷಿಸುವುದು ಹೇಗೆ?

**ಗೋಯಂಕಾಜಿ:** ಸಮಸ್ಯೆಯ ಕಾರಣವು ಪ್ರಶ್ನೆಯಲ್ಲಿಯೇ ಅಡಗಿದೆ. ಯಾವಾಗ ಈ ಸಂಸ್ಥೆಗಳು ತಮ್ಮ ವಿಸ್ತರಣೆಗಾಗಿಯೇ ಕೆಲಸ ಮಾಡುತ್ತವೋ, ಅವು ಆಗಲೇ ಕೊಳೆಯಲು ಪ್ರಾರಂಭಿಸುತ್ತವೆ. ಇತರೇ ಜನರಿಗೆ ಅನುಕೂಲ ಮಾಡುವುದು ಮುಖ್ಯ ಗುರಿಯಾಗಬೇಕು. ಆಗ ಅಲ್ಲಿ ಪರಿಶುದ್ಧವಾದ ಧಮ್ಮ ಸಂಕಲ್ಪವಿರುತ್ತದೆ ಮತ್ತು ಅವಸಾನ ಹೊಂದಲು ಅಲ್ಲಿ ಅವಕಾಶವೇ ಇರುವುದಿಲ್ಲ.

"ಹೆಚ್ಚು ಹೆಚ್ಚು ಜನರು ಪ್ರಯೋಜನ ಪಡೆಯಲಿ" ಎಂಬ ಧರ್ಮ ಸಂಕಲ್ಪವಿದ್ದರೆ ಅಲ್ಲಿ ಬಂಧನವಿರುವುದಿಲ್ಲ. ಆದರೆ ನಿಮ್ಮ ಸಂಸ್ಥೆ ಬೆಳೆಯಬೇಕೆಂದು ನೀವು ಬಯಸಿದರೆ, ಅಲ್ಲಿ ಬಂಧನವಿರುತ್ತದೆ ಮತ್ತು ಧರ್ಮವನ್ನು ಕಲುಷಿತಗೊಳಿಸುತ್ತದೆ. ('ಫಾರ್ ದ ಬೆನಿಫಿಟ್ ಆಫ್ ಮೆನಿ' ಪುಸ್ತಕದಿಂದ. ಪುಟ–32.)

### ಇತರೆ ಸ್ಥಳಗಳಲ್ಲಿ ಒಂದು ದಿನದ ಶಿಬಿರಗಳು

**ಮೈಸೂರು:** ಪ್ರತಿ ತಿಂಗಳು 4ನೇ ಭಾನುವಾರ. ಸಂಪರ್ಕ ಸಂಖ್ಯೆಗಳು: 7829912733, 9060300558, 880519658. **ಉಡುಪಿ:** ಪ್ರತಿ ತಿಂಗಳು ಎರಡನೇ ಭಾನುವಾರ. ಸಂಪರ್ಕ ಸಂಖ್ಯೆಗಳು: 9980897955 / 9449773942 9481149553. **ದಾವಣಗೆರೆ:** ಪ್ರತಿ ತಿಂಗಳು ಕೊನೆ ಭಾನುವಾರ. ಸಂಪರ್ಕ ಸಂಖ್ಯೆಗಳು: 9844245111 / 9986962762 9448588789 **ಹುಬ್ಬಳ್ಳಿ:** ಪ್ರತಿ ತಿಂಗಳು ಮೂರನೇ ಭಾನುವಾರ. ಸಂಪರ್ಕ ಸಂಖ್ಯೆ: 9880661506, **ಲೋಕಾಪುರ(ಬಾಗಲಕೋಟೆ):** ಮೊದಲ ಅಥವಾ ಎರಡನೇ ಭಾನುವಾರ ಸಂಪರ್ಕಿಸಿ: 9741275657

**10 ದಿನದ ಶಿಬಿರ ಆಯೋಜಿಸುವವರು ಮತ್ತು ಮಕ್ಕಳಿಗೆ 70ನಿಮಿಷದ ಆನಾಪಾನಾ ಧ್ಯಾನ ಶಿಬಿರ ವ್ಯವಸ್ಥೆ ಮಾಡುವವರು ಸಲಹೆ, ಸೂಚನೆಗಳಿಗಾಗಿ ಸಂಪರ್ಕಿಸಿ : ಸಂತೋಷ ಧರ್ಮರಾಜ್, ಬೆಂಗಳೂರು. ಮೊಬೈಲ್: 8762086089**

**ಕರ್ನಾಟಕದ ಶಾಲೆಗಳಲ್ಲಿ ಮಕ್ಕಳ ಶಿಬಿರಗಳು :** ಶಾಲೆಗಳಲ್ಲಿ ಮಕ್ಕಳಿಗಾಗಿ ಇಂಗ್ಲಿಷ್ ಮತ್ತು ಕನ್ನಡ ಭಾಷೆಯಲ್ಲಿ 70 ನಿಮಿಷದ ಆನಾಪಾನ ಧ್ಯಾನವನ್ನು ಹೇಳಿಕೊಡಲಾಗುತ್ತದೆ. ಸಂಪರ್ಕ ಸಂಖ್ಯೆಗಳು: 9880421155 / 9480581708 / 8762086089

### ಧಮ್ಮ ಪಫುಲ್ಲಾ, ಬೆಂಗಳೂರು

**10 ದಿನದ ಶಿಬಿರಗಳು: 2018** ಫೆಬ್ರವರಿ 28–11 ಮಾರ್ಚ್, 14–25, 4–15 ಏಪ್ರಿಲ್, 2–13 30ಮೇ–10ಜೂನ್, 13–24 ಜೂನ್, 27–8 ಜುಲೈ,11–22 ಜುಲೈ, 25–5 ಆಗಸ್ಟ್, 8–19, ಸೆಪ್ಟಂಬರ 1–12, 19–30.ಅಕ್ಟೋಬರ್ 10–21, 24–4 ನವೆಂಬರ್ 19–17, 21–2 ಡಿಸೆಂಬರ್ 5–16, 19–30. **ಮೂರು ದಿನದ ಶಿಬಿರ:** ಮಾರ್ಚ್ 29 ರಿಂದ ಏಪ್ರಿಲ್ 1. **ಎರಡು ದಿನದ ಶಿಬಿರ:** 25–27ಮೇ, 14–16ಸೆಪ್ಟಂಬರ್, 6–8ಅಕ್ಟೋಬರ್. **ಟೀನೆಜರ್ಸ್ ಕೋರ್ಸ್** (ವಯಸ್ಸು 15–19ವರ್ಷ)ಹೆಣ್ಣುಮಕ್ಕಳಿಗೆ ಮಾತ್ರ. ಮೇ16–24.**ಸತಿಪಠ್ಠಾನ ಶಿಬಿರಗಳು:** 18–27 ಏಪ್ರಿಲ್, 22–30 ಆಗಸ್ಟ್, **ಒಂದು ದಿನದ ಶಿಬಿರ:** ಪ್ರತಿ ಭಾನುವಾರ ಬೆಳಿಗ್ಗೆ 10ರಿಂದ ಸಾಯಂಕಾಲ 4 ಗಂಟೆ. **ಮಕ್ಕಳ ಶಿಬಿರ:** ಪ್ರತಿ ತಿಂಗಳು ಯಾವುದಾದರೂ ಒಂದು ಭಾನುವಾರ. **ವಿಳಾಸ:** ಧಮ್ಮ ಪಫುಲ್ಲ, ಆಲೂರು, ದಾಸನಪುರ ಹೋಬಳಿ, ಬೆಂಗಳೂರು. ರಾಷ್ಟ್ರೀಯ ಹೆದ್ದಾರಿ–4ರಲ್ಲಿ, ಹಿಮಾಲಯ ಡ್ರಗ್ ಕಂಪನಿಯ ಹತ್ತಿರ ಇಳಿದು ಅದರ ಎದುರು ರಸ್ತೆಯಲ್ಲಿ ಮಾಕಳಿ ಕ್ರಾಸ್‌ಗೆ ಬಂದರೆ ಆಟೋರಿಕ್ಷಾ ಸಿಗುತ್ತವೆ. ಬೆಂಗಳೂರು ಸಿಟಿ (ಕೆಂಪೇಗೌಡ) ಬಸ್ ನಿಲ್ದಾಣದಿಂದ ನಗರ ಸಾರಿಗೆ ಬಸ್ ಸಂಖ್ಯೆ: 256, 258, 258ಸಿ. ಮೊಬೈಲ್: 7829912733, 8861644284, 9972588377,
ಇ–ಮೇಲ್:info@paphulla.dhamma.org;
website: www.dhamma.org.

### ವಾರದ ಒಂದು ಗಂಟೆಯ ಸಾಮೂಹಿಕ ಸಾಧನಾ ಶಿಬಿರಗಳ ಮಾಹಿತಿ

**ಬೆಂಗಳೂರು: ಪ್ರತಿ ಭಾನುವಾರ: ಜಯನಗರ:** ಬೆಳಿಗ್ಗೆ 8.30 ರಿಂದ 9.30ರವರೆಗೆ, ಸುರೇಶ್/ರಾಜೇಶ್ವರಿ – 98867 75401 **ಸರ್ಜಾಪುರ ರಸ್ತೆ:** ಬೆಳಿಗ್ಗೆ 9.00 ರಿಂದ 10.00, ನಿರ್ಮಲ್ ಬೋತ್ರಾ–93412 22999, ಸ್ವಾತಿ–93426 75811, **ಬಸವೇಶ್ವರ ನಗರ** ಬೆಳಿಗ್ಗೆ 8.00 ರಿಂದ 9.00ರವರೆಗೆ, ಶ್ರೀ ಮಂಜುನಾಥ: 098451 71600, ಹೇಮಂತ: 074118 74462, **ಮಲ್ಲೇಶ್ವರಂ:** 8.30ರಿಂದ 9.30ರವರೆಗೆ, ಶ್ರೀ ದಿನೇಶ್ ಕುಮಾರ್–99452 38441 **ಕೆಂಗೇರಿ:** ಸಂಜೆ 4.30ರಿಂದ 5.30ರವರೆಗೆ, ವಸಂತ್ ಜಾಜೋ–98453 95152, 98445 29309. **ಆರ್.ಎಂ.ವಿ. 2ನೇ ಹಂತ:** ಬೆಳಿಗ್ಗೆ 7.50ರಿಂದ 9.00ರವರೆಗೆ, ಶ್ರೀ ತಾರಕ್ ಗೋರಾಡಿಯಾ–99454 58593. **ಪ್ರತಿ ಶನಿವಾರ: ವಿಜಯನಗರ:** ಸಂಜೆ 6–00 ರಿಂದ 7–00ರವರೆಗೆ, ತುಕಾರಾಮ್–97433 63339, ಪವನ್‌ಕುಮಾರ್–77607 52220.

**ಪ್ರತಿ ಮೊದಲ ಭಾನುವಾರ: ವೈಟ್‌ಫೀಲ್ಡ್:** ಬೆಳಿಗ್ಗೆ 9–30 ರಿಂದ 10–30ರವರೆಗೆ, ಶ್ರೀಮತಿ ವಲ್ಲರಿ/ರಾಜೇಶ್ ಮೊ.: 97403 22447

**ಬೆಂಗಳೂರಿನಲ್ಲಿ ಸಾಮೂಹಿಕ ಸಾಧನೆಗಳ ಬಗ್ಗೆ ಮಾಹಿತಿ ತಿಳಿಯಲು ವೆಬ್ ವಿಳಾಸ:**
**http://www.paphulla.dhamma.org/os/paphulla sittings.htm**

**ದಾವಣಗೆರೆ:** ಪ್ರತಿ ಶನಿವಾರ ಸಾಯಂಕಾಲ 5 ರಿಂದ 6 ಸಂಪರ್ಕಿಸಿ: 9448588789, 9844245111, 9986962762. **ಬಳ್ಳಾರಿ:** ಪ್ರತಿ ಗುರುವಾರ ಸಾಯಂಕಾಲ 6 ರಿಂದ 7, ಸಂಪರ್ಕಿಸಿ: 9986677012, **ಬೀದರ್:** ಪ್ರತಿ ಭಾನುವಾರ ಬೆಳಿಗ್ಗೆ 9 ರಿಂದ 10 ಸಂಪರ್ಕಿಸಿ: 9480240088, 9449556529, **ಧಾರವಾಡ:** ಪ್ರತಿ ಭಾನುವಾರ ಬೆಳಿಗ್ಗೆ 8 ರಿಂದ 9 ಸಂಪರ್ಕಿಸಿ: 9035032422, 9483483437, 7406934095, **ಬೆಳಗಾವಿ:** ಪ್ರತಿ ಭಾನುವಾರ ಬೆಳಿಗ್ಗೆ 7 ಇಂದ 8 ಸಂಪರ್ಕಿಸಿ: 9483285511, 9448591755, **ತೀರ್ಥಹಳ್ಳಿ:** ಪ್ರತಿ ಭಾನುವಾರ ಬೆಳಿಗ್ಗೆ 10.30 ರಿಂದ 11.30 ಸಂಪರ್ಕಿಸಿ: 9448814196, **ಮಂಗಳೂರು:** ಪ್ರತಿ ಭಾನುವಾರ ಬೆಳಿಗ್ಗೆ 8 ರಿಂದ 9 ಸಂಪರ್ಕಿಸಿ: 9900736473

**ವಂತಿಗೆ : ವಾರ್ಷಿಕ: ರೂ.30, ಆಜೀವ: ರೂ.500. ವಂತಿಗೆ ಸಂದಾಯ ಮಾಡಬೇಕಾದ ಬ್ಯಾಂಕ್ ಖಾತೆ :3194101004234; IFSC code:CNRB0003194; ಕೆನರಾ ಬ್ಯಾಂಕ್, ನಾಗರಬಾವಿ, ಬೆಂಗಳೂರು. ಖಾತೆದಾರರು:ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ. ಹಣ ಸಂದಾಯದ ವಿವರ ಮತ್ತು ಪತ್ರಿಕೆ ಕಳುಹಿಸಬೇಕಾದ ಅಂಚೆ ವಿಳಾಸವನ್ನು ಶ್ರೀಮತಿ ಪುಷ್ಪ .ಎಸ್., ಮೊ.ಸಂ:7337734934 ಗೆ ಎಸ್.ಎಮ್.ಎಸ್.ಮಾಡಿರಿ.**

**ಮುದ್ರಕರು:** ಬಿ.ಪ್ರದೀಪ ಕುಮಾರ, **ಪ್ರಕಾಶಕರು:** ಶ್ರೀಮತಿ ಆರ್. ಚಂದ್ರಮತಿ ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್ ಪರವಾಗಿ. **ಮುದ್ರಣ:** ಐರಣಿ ಆಫ್‌ಸೆಟ್ ಪ್ರಿಂಟರ್ಸ್, 4ನೇ ತಿರುವು, ಕೆ.ಹೆಚ್.ಬಿ.ಕಾಲೋನಿ,ದಾವಣಗೆರೆ–2.**ಪ್ರಕಾಶನ:**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್, #93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560070. **ಗೌರವ ಸಂಪಾದಕರು:** ಜಿ.ಟಿ. ಗೋವಿಂದಪ್ಪ

**Printed by** B.Pradeep Kumar, **Published by** Smt. R. Chandramathi on be half of Karnataka Vipassana Prachara Samithi Trust and **Printed at**: Airani Offset Printers, 4th Cross, K.H.B.Colony, Davangere-2 and **Published at** Karnataka Vipassana Prachara Samithi Trust, #93, 30th Cross, Banashankari 2nd Stage, Bengaluru - 70. **Editor:** G.T. Govindappa,

**ಮುದ್ರಿತ ವಿಷಯ** ತೆರೆದ–ಅಂಚೆ

ಗೆ,

ಇಂದ:
**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್**
#93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು–560070.